ಸುದ್ದಿ ಸಂಚಯ

# ಚೆನ್ನೈನಲ್ಲಿ ಸಹಸ್ರಮಾನದ ದೇವಾಲಯ




ಚೆನ್ನೈ ಶ್ರೀರಾಮಕೃಷ್ಣ ಮಠದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ದೇವಾಲಯ

ಸರ್ವಧರ್ಮಗಳೂ ಆತ್ಮಸಾಕ್ಷಾತ್ಕಾರವೆಂಬ ಏಕೈಕ ಗುರಿಯನ್ನು ಹೊಂದಿವೆಯೆಂದು ಬೋಧಿಸಿದ ಶ್ರೀರಾಮಕೃಷ್ಣ ಪರಮಹಂಸರ ವಿಶ್ವವಿಶಾಲ ಧಾರ್ಮಿಕ ಆದರ್ಶ ಹೊಸ ಸಹಸ್ರಮಾನದ ಮುಂಬೆಳಗಿನಲ್ಲಿ ಸಾಕಾರಗೊಂಡಿದೆ, ಚೆನ್ನೈ ನಗರದಲ್ಲಿ ಇದೀಗ ಸಮರ್ಪಣೆಗೊಂಡಿರುವ 'ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ದೇವಾಲಯ'ದ ಮೂಲಕ. ಫೆಬ್ರವರಿ ೫ ರಿಂದ ೧೨ ರವರಗೆ ನಡೆದ 'ವಿಶ್ವಭಾವೈಕ್ಯ ದೇವಾಲಯ'ದ ಮಹಾಕುಂಭಾಭಿಷೇಕವು ಅನೇಕಾನೇಕ ಸಾಧುಸಂತರ ಹಾಗೂ ಭಕ್ತಾದಿಗಳ ಸಮ್ಮುಖದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಸ್ವಾಮಿ ಸ್ಮರಣಾನಂದಜೀ ಮಹಾರಾಜರು (ಈಗ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳು) ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾಗಿ ೧೯೯೧ ರಲ್ಲಿ ಬಂದ ಬಳಿಕ 'ವಿಶ್ವಭಾವೈಕ್ಯ ದೇವಾಲಯ'ದ ಯೋಜನೆಗೆ ಮೂರ್ತರೂಪ ಬಂತು. ಸುಮಾರು ೬.೫ ಕೋಟಿ ರೂಪಾಯಿ ವೆಚ್ಚದ ಅಂದಾಜಿನಲ್ಲಿ ದಕ್ಷಿಣಭಾರತದ ಪರಂಪರಾನುಗತ ದೇವಾಲಯ ಶೈಲಿಯಲ್ಲಿ ತಯಾರಿಸಲಾದ ಯೋಜನೆ ೧೯೯೪ರಲ್ಲಿ ಭೂಮಿ ಪೂಜೆ, ಗಣಪತಿ ಹೋಮಗಳೊಂದಿಗೆ ಆರಂಭಗೊಂಡು ೨೦೦೦ನೇ ಇಸವಿಯ ಹೊತ್ತಿಗೆ ಪೂರ್ಣಗೊಂಡಿತು. ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಹಾಗೂ ಸ್ವಾಮಿ ವಿವೇಕಾನಂದರು ಜಗತ್ತಿಗೆ ನೀಡಿದ ವಿಶ್ವಾತ್ಮಭಾವನೆಯ ಧರ್ಮದ ಆದರ್ಶ ಪ್ರಸಾರವಾಗಲು ಈ ಮೂಲಕ ಮತ್ತೊಂದು ಹೊಸ ನೆಲೆ ನಿರ್ಮಾಣಗೊಂಡಂತಾಗಿದೆ.

ದಿನಾಂಕ ೫ ರಂದು ಬೆಳಗ್ಗೆ ೩.೩೦ ಕ್ಕೆ ನಾದಸ್ವರದ ಮಂಗಳ ಧ್ವನಿಯೊಂದಿಗೆ ಕಾರ್ಯಕ್ರಮಗಳು ಆರಂಭಗೊಂಡವು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರುಗಳಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ಗಹನಾನಂದಜೀ ಮಹಾರಾಜರು ಸ್ಮರಣಸಂಚಿಕೆ ಮತ್ತು ಹೊಸ ಪ್ರಕಟಣೆಗಳನ್ನು ಬಿಡುಗಡೆಗೊಳಿಸಿದರು. ದಿನಾಂಕ ೬ ರಂದು ಸ್ವಾಮಿ ಪೀತಾಂಬರಾನಂದಜಿ ಮಹಾರಾಜ್ ಅವರ ಅಧ್ಯಕ್ಷತೆಯಲ್ಲಿ ಸಾಧು ಸಮ್ಮೇಳನ ನಡೆಯಿತು. ದಿನಾಂಕ ೭ ರಂದು 'ವಿಶ್ವಭಾವೈಕ್ಯ ದೇವಾಲಯ'ದ ಸಮರ್ಪಣೆಯ ಪ್ರಧಾನ ಮಹೋತ್ಸವ. ಪ್ರಾತಃಕಾಲ

೬.೩೦ ರ ಸುಮುಹೂರ್ತದಲ್ಲಿ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜೀಯವರು ವಿಶ್ವಭಾವೈಕ್ಯ ದೇವಾಲಯವನ್ನು (ವಿಶ್ವೈಕ್ಯ) ಸಮರ್ಪಿಸಿದರು. ಅನಂತರ, ೯.೦೫ ಘಂಟೆಗೆ ಮಹಾಕುಂಭಾಭಿಷೇಕ ಜರುಗಿತು. ಸ್ವಾಮಿ ರಾಮಕೃಷ್ಣಾನಂದ ಹಾಲ್‌ನ ಉದ್ಘಾಟನೆ ನಡೆಯಿತು.

ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾಗಿರುವ ಸ್ವಾಮಿ ಗೌತಮಾನಂದಜಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. 'ಸ್ವಾಮಿ ರಾಮಕೃಷ್ಣಾನಂದರಿಂದ ಸ್ಥಾಪಿತವಾದ ಈ ಮಠದಲ್ಲಿ ಭಕ್ತರ ಸಂಖ್ಯೆ ಹೆಚ್ಚಿದಂತೆಲ್ಲ ದೊಡ್ಡ ಪ್ರಾರ್ಥನಾಮಂದಿರದ ಆವಶ್ಯಕತೆ ಕಂಡು ಬಂದಿತು. ಅದಕ್ಕನುಗುಣವಾಗಿ ಹೊಸ ಶೈಲಿಯ, ಈ ಯುಗದ ಧಾರ್ಮಿಕ ಆದರ್ಶವಾದ 'ವಿಶ್ವಭಾವೈಕ್ಯ'ವನ್ನು ನಿರೂಪಿಸುವ ಈ ಮಂದಿರವನ್ನು ಕಟ್ಟಲಾಯಿತು' ಎಂದರು.

ರಾಮಕೃಷ್ಣಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜೀಯವರು ಮಾತನಾಡುತ್ತ, 'ಚೆನ್ನೈಮಠವು ಶ್ರೀಮಾತೆ ಹಾಗೂ ಶ್ರೀರಾಮಕೃಷ್ಣರ ಹಲವಾರು ನೇರ ಶಿಷ್ಯರ ಸಂಸರ್ಗದಿಂದ ಪವಿತ್ರಗೊಂಡಿದೆ. ಆಸ್ಪತ್ರೆ, ಶಾಲೆ ಕಟ್ಟಿ ಜನಸೇವೆ ಮಾಡುವ ಬದಲು ಇಷ್ಟೊಂದು ಖರ್ಚಿನಿಂದ ದೇವಾಲಯ ಕಟ್ಟುವುದೇಕೆ ಎಂದು ಕೆಲವರು ಪ್ರಶ್ನಿಸಿದ್ದಾರೆ. ಇದು ಒಂದು ಆಸ್ಪತ್ರೆಯೇ. ಮಾನಸಿಕವಾಗಿ ನೊಂದ, ಬೆಂದ ಜನರಿಗೆ ಆಧ್ಯಾತ್ಮಿಕ ಚಿಕಿತ್ಸೆ ನೀಡುವ ಆಸ್ಪತ್ರೆ ಇದು. ಹೆಚ್ಚು ಸಂಖ್ಯೆಯ ಭಕ್ತರ ಪ್ರಾರ್ಥನೆಗೆ ಅನುಕೂಲವಾಗುವಂತೆ ಕಟ್ಟಿದ ಈ ದೇವಾಲಯ ನಿಜವಾಗಿಯೂ ಉಪಯುಕ್ತವಾದುದು' ಎಂದರು.

ಸಭೆಯಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಪರಮ ಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜೀ ಮಹಾರಾಜ್ ಅವರು, 'ಇಂದು ಸಮರ್ಪಣೆಗೊಂಡ ದೇವಾಲಯ ಗಾತ್ರದಲ್ಲಿ ಹಿರಿದು. ಇಲ್ಲಿ ನೆರೆದ ಭಕ್ತರ ಸಂಖ್ಯೆಯೂ ಗಮನಾರ್ಹ. ಇದು ಒಂದು ಶತಮಾನದಲ್ಲಾದ ಅದ್ಭುತ ಬದಲಾವಣೆಯನ್ನು ಸೂಚಿಸುತ್ತದೆ. ನಮ್ಮಲ್ಲಿ ಉನ್ನತ ತತ್ವಗಳಿವೆ, ಆದರೆ ಆಚರಣೆ ಕೆಳಮಟ್ಟದ್ದು. ಶ್ರೀರಾಮಕೃಷ್ಣರು ಅದ್ಭುತವಾದ ಸಾಧನೆ ಮಾಡಿದರು.ಅವರು ಅಂತ್ಯಜನ ಶೌಚಾಲಯವನ್ನು ಸ್ವಚ್ಛಗೊಳಿಸಿ "ದೇವರೇ, ನಾನು ಬ್ರಾಹ್ಮಣನೆಂಬ ಅಭಿಮಾನ ತೊಲಗಲಿ" ಎಂದು ಪ್ರಾರ್ಥಿಸಿದರು. ಶ್ರೀಮಾತೆ ಶಾರದಾದೇವಿಯವರು ಮುಸ್ಲಿಂ ಭಕ್ತನೊಬ್ಬನು ಉಂಡ ನೆಲವನ್ನು ಒರೆಸಿದರು. ಮ್ಲೇಚ್ಛರೆಂದು ಕರೆಯಲಾಗುತ್ತಿದ್ದ ಜನಾಂಗದವರಾದ ನಿವೇದಿತಾಳನ್ನು ಸ್ವೀಕರಿಸಿದರು. ಸ್ವಾಮಿ ವಿವೇಕಾನಂದರ ಹೃದಯವಂತೂ ವಿಶ್ವವ್ಯಾಪಕ. ಹೀಗೆ ಆರಂಭಗೊಂಡ ಧರ್ಮ ಹೊಸರೂಪವನ್ನು ತಳೆದು ಭಕ್ತಿ, ಭಾವನೆಗಳು ಕಾರ್ಯರೂಪದಲ್ಲಿ ವ್ಯಕ್ತಗೊಳ್ಳುವಂತಾಯಿತು. ಈ ದೇವಾಲಯ ಎಲ್ಲರಿಗೂ ಆಧ್ಯಾತ್ಮಿಕ ಸ್ಫೂರ್ತಿನೀಡಲಿ, ದಿವ್ಯತ್ರಯರು ನಮ್ಮನ್ನು ಹರಸಲಿ' ಎಂದರು.

ದಿನಾಂಕ ೮ರಂದು 'ಧರ್ಮಸಮನ್ವಯ ದಿನ' ವನ್ನೂ, ೧೧ ರಂದು 'ಶ್ರೀರಾಮಕೃಷ್ಣದಿನ' ವನ್ನೂ, ೧೦ ರಂದು 'ಶ್ರೀಶಾರದಾದೇವೀ ದಿನ ' ವನ್ನೂ, ೧೧ ರಂದು 'ಸ್ವಾಮಿ ವಿವೇಕಾನಂದ ದಿನ' ಹಾಗೂ ೧೨ ರಂದು 'ಶ್ರೀರಾಮಕೃಷ್ಣಾನಂದ ದಿನ' ವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

ಈ ಕಾರ್ಯಕ್ರಮಗಳಲ್ಲಿ ರಾಮಕೃಷ್ಣಮಹಾಸಂಘದ ಉಪಾಧ್ಯಕ್ಷರುಗಳಾದ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜ್, ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್, ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಹಾಗೂ ಇತರ ಹಿರಿಯ ಸಾಧುಗಳು ಭಾಗವಹಿಸಿದ್ದರು. ಭಾರತ ಹಾಗೂ ವಿದೇಶಗಳಲ್ಲಿರುವ ರಾಮಕೃಷ್ಣ ಮಹಾಸಂಘದ ವಿವಿಧ ಶಾಖೆಗಳಿಂದ ಬಂದಿದ್ದ ಸುಮಾರು ೪೫೦ ಕ್ಕೂ ಹೆಚ್ಚು ಸಾಧುಗಳು, ಸುಮಾರು ೩೫,೦೦೦ ಕ್ಕೂ ಹೆಚ್ಚು ಭಕ್ತಾದಿಗಳು ಈ ಉತ್ಸವದಲ್ಲಿ ಪ್ರತಿನಿಧಿಗಳಾಗಿ ಪಾಲ್ಗೊಂಡಿದ್ದರು. ಪ್ರತಿದಿನ ಸುಪ್ರಭಾತ, ವೇದ ಘೋಷ, ಭಜನೆ, ಪ್ರವಚನಗಳು, ಧಾರ್ಮಿಕ ಸಮ್ಮೇಳನಗಳು, ಶಾಸ್ತ್ರೀಯ ಸಂಗೀತ ಮೊದಲಾದ ಕಾರ್ಯಕ್ರಮಗಳಿಂದ ಭಕ್ತರ ಜನಮನದಲ್ಲಿ ಉತ್ಸಾಹ, ಶ್ರದ್ಧೆ, ಭಕ್ತಿಯ ವಾತಾವರಣ ನಿರ್ಮಾಣಗೊಂಡಿತ್ತು. ಒಟ್ಟಿನಲ್ಲಿ, ಹೊಸ ಸಹಸ್ರಮಾನದ ಆದಿಭಾಗದಲ್ಲೇ ದಿವ್ಯ ಆದರ್ಶದ ನಾಂದಿಯೆಂಬಂತೆ 'ವಿಶ್ವಭಾವೈಕ್ಯ ದೇವಾಲಯ'ದ ಮಹಾಕುಂಭಾಭಿಷೇಕವು ಉಜ್ವಲ ವೈಭವದಿಂದ ಜರುಗಿತು.

ಧರ್ಮ ಇರುವುದು ಪ್ರೀತಿಯಲ್ಲಿ, ಬಾಹ್ಯಾಚಾರದಲ್ಲಿ ಅಲ್ಲ. ಧರ್ಮಕ್ಕೆ ಶುದ್ಧ ನಿಷ್ಕಪಟ ಹೃದಯವೇ ಮುಖ್ಯ. ಒಬ್ಬನ ದೇಹ ಮತ್ತು ಮನಸ್ಸು ಪರಿಶುದ್ಧವಿಲ್ಲದೇ ಇದ್ದರೆ ಅವನು ದೇವಸ್ಥಾನಕ್ಕೆ ಬಂದು ಪ್ರಾರ್ಥಿಸಿದರೆ ಪ್ರಯೋಜನವಿಲ್ಲ. ಪರಿಶುದ್ಧ ದೇಹದಿಂದ ಮತ್ತು ಮನಸ್ಸಿನಿಂದ ಪ್ರಾರ್ಥಿಸಿದರೆ ಶಿವ ಅದನ್ನು ನೆರವೇರಿಸುವನು.

**ಸ್ವಾಮಿ ವಿವೇಕಾನಂದ**

## ಲೇಖನಗಳಿಗಾಗಿ ಮನವಿ

'ವಿವೇಕಪ್ರಭ' ಪತ್ರಿಕೆಗಾಗಿ ದರ್ಶನ, ಧರ್ಮ, ಆಧ್ಯಾತ್ಮಿಕತೆ, ನೈತಿಕತೆ, ಶಿಕ್ಷಣ – ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಕಳಿಸಬಹುದು. ಲೇಖನ ಮುದ್ರಿತ ೩ ಅಥವಾ ೪ ಪುಟಗಳ ಒಳಗೆ ಇರಬೇಕು. ಪತ್ರಿಕೆಯ ಧ್ಯೇಯ ಮತ್ತು ಆವಶ್ಯಕತೆಗನುಗುಣವಾಗಿ ಲೇಖನಗಳನ್ನು ತಿದ್ದುವ ಮತ್ತು ಹ್ರಸ್ವಗೊಳಿಸುವ ಅಧಿಕಾರ ಸಂಪಾದಕರಿಗಿರುತ್ತದೆ.